ಸಂಪುಟ: 01 ಸಂಚಿಕೆ: 53 ಪುಟ: 04 ಬೆಲೆ: 02 ಭಾನುವಾರ ಆಗಸ್ಟ್ 02 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

Volume:01 Issue: 53 Pages:04 Price:02 SUNDAY AUGUST 02 2026 RNI NO: KNKAN/26/A4008 E-mail:ajathashathru2026@gmail.com




# ಮೈ ಭಾರತ್–ಜಿಲ್ಲಾ ಸಲಹಾ ಸಮಿತಿ ಸಭೆ

## ಮೈ ಭಾರತ್ ಪೋರ್ಟಲ್‌ನಲ್ಲಿ ಹೆಚ್ಚಿನ ಸಂಖ್ಯೆಯ ಯುವಜನ ನೋಂದಣಿ ಮಾಡಿಕೊಳ್ಳುವಂತೆ ಕ್ರಮ ವಹಿಸಿ: ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ

**ಕೊಪ್ಪಳ: ಜಿಲ್ಲೆಯಲ್ಲಿನ 15 ರಿಂದ 29 ವರ್ಷದ ಯುವಕ–ಯುವತಿಯರು ಮೈ ಭಾರತ್ ಪೋರ್ಟಲ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಶಾಲಾ ಕಾಲೇಜುಗಳ ಮುಖ್ಯಸ್ಥರು ಹಾಗೂ ವಸತಿ ನಿಲಯಗಳ ವಾರ್ಡನ್‌ಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಸೂಚಿಸಿದರು.**

ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾದ 'ಮೈ ಭಾರತ್' (ಮೇರಾ ಯುವ ಭಾರತ್) ವತಿಯಿಂದ 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ, ವಿವಿಧ ಇಲಾಖೆಗಳ ಸಮನ್ವಯ ಬಲಪಡಿಸುವುದು ಹಾಗೂ ಯುವಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಶುಕ್ರವಾರದಂದು



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೈ ಭಾರತ್ ಯೋಜನೆಯು ಸ್ವಯಂಸೇವಕತೆ, ಅನುಭವಾಧಾರಿತ ಕಲಿಕೆ, ನಾಯಕತ್ವ ಅಭಿವೃದ್ಧಿ, ಕೌಶಲ್ಯಾಭಿವೃದ್ಧಿ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ತಂತ್ರಜ್ಞಾನ ಆಧಾರಿತ ವೇದಿಕೆಯಾಗಿದೆ. ಮೈ ಭಾರತ್ ಪೋರ್ಟಲ್‌ನಲ್ಲಿ ಯುವಜನರ ನೋಂದಣಿ ಹೆಚ್ಚಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಎನ್‌ಸಿಸಿ, ಎನ್‌ಎಸ್‌ಎಸ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಇತರ ಇಲಾಖೆಗಳು ವಿಶೇಷ ಅಭಿಯಾನ ನಡೆಸಿ ಸಂಪೂರ್ಣ ಸಹಕಾರ ನೀಡಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

**ಪೋಸ್ಟರ್ ಬಿಡುಗಡೆ:** 'ನಶಾ ಮುಕ್ತ ಯುವ – ವಿಕಸಿತ್ ಭಾರತ' ಅಭಿಯಾನದ ಅಂಗವಾಗಿ 2026ರ ಆಗಸ್ಟ್ 3 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳದ ದದೇಗಲ್‌ನಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳು ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದ ಭಿತ್ತಿಪತ್ರವನ್ನು (ಪೋಸ್ಟರ್) ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಬಿಡುಗಡೆ ಮಾಡಿದರು. ಸಭೆಯಲ್ಲಿ ಮೈ–ಭಾರತ್ ಕೊಪ್ಪಳದ ಜಿಲ್ಲಾ ಯುವ ಅಧಿಕಾರಿ ಮೇಘಾ ಜಿ.ಕೆ., ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಗದೀಶ್ ಜಿ.ಎಚ್., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠಲ್ ಜಾಬಗೌಡರ್, ಲೀಡ್ ಬ್ಯಾಂಕ್ ಮ್ಯಾನೇಜರ್ ಮಾರುತಿ ಕೆ.ಕೆ. ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಜಯ ಮಹಾಂತ ಶಿವಯೋಗಿಗಳು ಕಂಡ ವ್ಯಸನ ಮುಕ್ತ ಸಮಾಜದ ಕನಸು ನನಸಾಗಬೇಕು :ರಾಮರಡ್ಡೆಪ್ಪ ಹಾಲಕೇರಿ

ಅ.ಶ. ಸುದ್ದಿ ಕುಕನೂರು

**ಕುಕನೂರ: ವಿಜಯ ಮಹಾಂತ ಶಿವಯೋಗಿಗಳು ಕಂಡ ವ್ಯಸನ ಮುಕ್ತ ಸಮಾಜದ ಕನಸು ನನಸಾಗಬೇಕು ಎಂದು ಇಟಗಿ ಪಿ ಎಂ ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ರಾಮರಡ್ಡೆಪ್ಪ ಹಾಲಕೇರಿ ಹೇಳಿದರು. ಅವರು ತಾಲೂಕಿನ ಇಟಗಿ ಗ್ರಾಮದ ಪಿ ಎಂ ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ವ್ಯಸನ ಮುಕ್ತ ದಿನಾಚರಣೆ ಆಚರಿಸಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.**

ಪ್ರತಿ ವರ್ಷ ಆಗಸ್ಟ್ 1 ಬಂದರೆ ಕರ್ನಾಟಕದಾದ್ಯಂತ ಒಂದು ವಿಶಿಷ್ಟ ಜಾಗೃತಿಯ ಅಲೆ ಎಳುತ್ತದೆ. ಅದು ವ್ಯಸನ ಮುಕ್ತ ದಿನಾಚರಣೆ. ಈ ದಿನಾಚರಣೆ ಕೇವಲ ಒಂದು ಸರ್ಕಾರಿ ಕಾರ್ಯಕ್ರಮವಲ್ಲ, ಇದು ಒಂದು ಸಾಮಾಜಿಕ ಚಳುವಳಿಯಾಗಿದೆ. ಈ ದಿನವನ್ನು ಬಾಗಲಕೋಟೆ ಜಿಲ್ಲೆಯ ಇಳಕಲ್– ಚಿತ್ತರಗಿಯ ವಿಜಯ ಮಹಾಂತ ಸಂಸ್ಥಾನ ಮಠದ ಲಿಂಗೈಕ್ಯ ಡಾ. ವಿಜಯ ಮಹಾಂತ ಶಿವಯೋಗಿಗಳ ಜನ್ಮ ದಿನದ ಪ್ರಯುಕ್ತ ಅವರ ಹೆಸರಿನಲ್ಲಿ ಆಚರಿಸಲಾಗುತ್ತದೆ. ಈ ಒಂದು ದಿನಾಚರಣೆಯ ಹಿಂದೆ ಒಬ್ಬ ಮಹಾನ್ ಚೇತನರ ಇಡಿ ಬದುಕಿನ ತಪಸ್ಸು ಇದೆ, ಅವರ ದೂರದೃಷ್ಟಿ ಇದೆ, ಯುವಕರ ಬಗೆಗಿನ ಅವರ ಕಾಳಜಿ ಇದೆ ಎಂದರು.



ಲಿಂಗೈಕ್ಯ ವಿಜಯ ಮಹಾಂತ ಶ್ರೀಗಳು ಕೇವಲ ಮಠಾಧೀಶರಾಗಿರಲಿಲ್ಲ, ಅವರು ಒಬ್ಬ ಸಮಾಜ ಸುಧಾರಕರು, ಒಬ್ಬ ಚಿಂತಕರು, ಯುವ ಚೇತನದ ಹರಿಕಾರರು ಆಗಿದ್ದರು. ಮಠವೆಂದರೆ ಕೇವಲ ಪೂಜೆ, ಪುನಸ್ಕಾರ, ದೀಕ್ಷೆ ನೀಡುವ ಸ್ಥಳವಲ್ಲ, ಮಠವೆಂದರೆ ಸಮಾಜವನ್ನು ತಿದ್ದುವ ಪಾಠ ಶಾಲೆ ಎಂದು ಅವರು ನಂಬಿದ್ದರು. ಅವರ ಕಾಲದಲ್ಲಿ ಮತ್ತು ಇಂದಿಗೂ ಸಮಾಜವನ್ನು ಬಾಧಿಸುತ್ತಿರುವ ಬಹುದೊಡ್ಡ ಪಿಡುಗು ಎಂದರೆ ವ್ಯಸನ. ಮದ್ಯಪಾನ, ಗುಟ್ಕಾ, ತಂಬಾಕು, ಮಾದಕ ದ್ರವ್ಯಗಳು ಇಂದು ಹಳ್ಳಿ ಹಳ್ಳಿಗಳಿಗೂ ನುಗ್ಗಿವೆ. ಯುವಕರು ಅವಕ್ಕೆ ದಾಸರಾಗಿ ದಾರಿ ತಪ್ಪುತ್ತಿದ್ದಾರೆ. ಒಂದು ಕುಟುಂಬದ ಒಬ್ಬ ವ್ಯಕ್ತಿ ವ್ಯಸನಿಯಾದರೆ ಆ ಇಡೀ ಕುಟುಂಬವೇ ನಾಶವಾಗುತ್ತದೆ. ಆರ್ಥಿಕವಾಗಿ ದಿವಾಳಿಯಾಗುತ್ತದೆ, ಸಾಮಾಜಿ–ಕವಾಗಿ ಅವಮಾನಕ್ಕೆ ಒಳಗಾಗುತ್ತದೆ. ಈ ಸತ್ಯವನ್ನು ಶ್ರೀಗಳು ಅರಿತಿದ್ದರು.

ಹೀಗಾಗಿ ಅವರು ತಮ್ಮ ಇಡೀ ಬದುಕನ್ನು ವ್ಯಸನಮುಕ್ತ ಸಮಾಜದ ನಿರ್ಮಾಣಕ್ಕೆ ಮುಡಿಪಾಗಿಟ್ಟರು ಎಂದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಸಂತೋಷ ಕುಮಾರಿ, ನಾಗರಾಜ ಸೋನಗ, ಬಸಮ್ಮ ಮೇಟಿ, ರಂಗಪ್ಪ ಓಲೆಕಾರ, ವಿರುಪಾಕ್ಷಪ್ಪ ಮ್ಯಾಳಿ, ಜಯಪ್ಪ , ಶ್ರೀಶೈಲಪ್ಪ ತೆಗ್ಗಿ , ರೋಹಿಣಿ ಸಿ , ಶ್ರೀದೇವಿ ಬೆಳದಡಿ, ಜಗದೀಶ ಅಜ್ಜಣ್ಣನವರ್, ಮಹೇಶ ರಾಮದುರ್ಗ, ಮುರಾರಿ ಭಜಂತ್ರಿ, ಮಂಜುನಾಥ ಜಗತಾಪ, ಶ್ವೇತಾ, ಪೂಜಾ, ಭೀಮಾಂಬಿಕಾ, ಕಿರಣ್, ರವಿಕಿರಣ್, ಸಿಂಧು, ರೋಹಿಣಿ, ಸುಶ್ಮಿತಾ, ರೇಣುಕಾ, ಹಾಗೂ ರಹಿಮಾನಸಾಬ, ಶಾಲಾ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದ್ದರು.

## ರಂಗಗೀತೆ ಹಾಗೂ ಜನಪದ ಗೀತೆಗಳು ಕನ್ನಡ ನಾಟಕ ರಂಗದ ಸೊಬಗನ್ನು ಹೆಚ್ಚಿಸಿವೆ: ಕೆ. ನಿಂಗಜ್ಜ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ರಂಗ ಗೀತೆಗಳು ಹಾಗೂ ಜನಪದ ಗೀತೆಗಳು ಕನ್ನಡ ನಾಟಕ ರಂಗ ಮತ್ತು ಭಾಷೆಯ ಶ್ರೀಮಂತಿಕೆಯನ್ನು ಹೆಚ್ಚಿಸುವುದರ ಜೊತೆಗೆ ಅದರ ಸೊಬಗನ್ನೂ ವೃದ್ಧಿಸಿವೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯ ಹಾಗೂ ಹಿರಿಯ ಪತ್ರಕರ್ತ ಕೆ. ನಿಂಗಜ್ಜ ಹೇಳಿದರು.**



ನಗರದ ಕನ್ನಡ ಜಾಗೃತಿ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ರಂಗಭೂಮಿ ಕಲಾವಿದೆ ಜಿ. ವಂದನಾ ಅವ–ರಿಂದ ಆಯೋಜಿಸಿದ್ದ ರಂಗಗೀತೆ ಮತ್ತು ಜನಪದ ಗೀತೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಗೀತ, ನಾಟಕ ಹಾಗೂ ವಿವಿಧ ಕಲಾ ಕ್ಷೇತ್ರಗಳ ಕಲಾವಿದರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ. ಕಲಾವಿದ–ರಿಗೆ ಇನ್ನಷ್ಟು ಅವಕಾಶಗಳು ದೊರೆಯುವಂತೆ ಯೋಜನೆಗಳನ್ನು ರೂಪಿಸಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಹಿರಿಯ ಪತ್ರಕರ್ತ ಸುದರ್ಶನ್ ವೈದ್ಯ ಮಾತನಾಡಿ ಹಿಂದೆ ಕಲಾವಿದರಿಗೆ ರಾಜ ಮಹಾರಾಜರು ಆಶ್ರಯ ನೀಡುತ್ತಿದ್ದರು, ಪ್ರಸ್ತುತ ದಿನಗಳಲ್ಲಿ ಕಲೆಯನ್ನೇ ನಂಬಿದ ಕಲಾವಿದರು ಗಳಿಗೆ ಸರ್ಕಾರದ ನೆರವು ಸಿಗದೇ ಸಂಕಷ್ಟದಲ್ಲಿದ್ದಾರೆ ಎಂದು ಹೇಳಿದರು. ಬಳಿಕ ರಂಗಭೂಮಿ ಕಲಾವಿದೆ ಜಿ. ವಂದನಾ ಅವರು ರಂಗಗೀತೆಗಳು ಹಾಗೂ ಜನಪದ ಗೀತೆಗಳನ್ನು ಹಾಡಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು. ಕಾರ್ಯಕ್ರಮದಲ್ಲಿ ಉಡಮಕಲ್ ಗಡ್ಡಿಯ ಅಪ್ಪಾಜಿ, ಶರಣಬಸವ ದೇವರು, ರೇವಣ ಸಿದ್ದಯ್ಯ ತಾತನವರು, ಅಮರೇಶಪ್ಪ ಇಂಗಳಗಿ, ಸಾಹಿತಿ ಶರಣಪ್ಪ ಮೆಟ್ರಿ, ವಿಜಯಲಕ್ಷ್ಮೀ ಹಿರೇಮಠ, ಬಿಜೆಪಿ ಮಹಿಳಾ ಮುಖಂಡರಾದ ಸೌಭಾಗ್ಯ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಕ್ಷೇತ್ರದ ಶಾಸಕರಿಗೆ ರೈತರ ಬಗ್ಗೆ ಕಾಳಜಿ ಇಲ್ಲಾ,,

## ಶಾಸಕರು ಕ್ಷೇತ್ರವನ್ನು ಬರ ಪೀಡಿತ ಕ್ಷೇತ್ರ ಎಂದು ಘೋಷಣೆ ಮಾಡಿಸಲಿ: ಮಾಜಿ ಸಚಿವ ಹಾಲಪ್ಪ ಆಚಾರ ಆಗ್ರಹ,,

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಈ ವರ್ಷ ಮುಂಗಾರು ಮಳೆ ಬಾರದೆ ಬಿತ್ತಿದ ಬೆಳೆ ಭೂಮಿಯಲ್ಲಿ ಬತ್ತಿ ಹೋಗಿದೆ, ಕ್ಷೇತ್ರದಲ್ಲಿ ತೀವ್ರ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಕ್ಷೇತ್ರದ ಶಾಸಕರಿಗೆ ರೈತರ ಬಗ್ಗೆ ಕಾಳಜಿ ಇಲ್ಲ ಮಂತ್ರಿ ಸ್ಥಾನಕ್ಕಾಗಿ ಎರಡು ತಿಂಗಳಿಂದ ದೆಹಲಿಯಲ್ಲಿ ಕುಳಿತುಕೊಂಡಿದ್ದಾರೆ ಎಂದು ಮಾಜಿ ಸಚಿವ ಹಾಲಪ್ಪ ಆಚಾರ ಹೇಳಿದರು.**

ಅವರು ಪಟ್ಟಣದ ಭಾರತೀಯ ಜನತಾ ಪಕ್ಷ ಹಾಗೂ ಜೆಡಿಎಸ್ ಪಕ್ಷದಿಂದ ಚೆನ್ನಮ್ಮ ವೃತ್ತದಲ್ಲಿ ಯಲಬುರ್ಗಾ ಕ್ಷೇತ್ರವನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡವಂತೆ ಆಗ್ರಹಿಸಲು ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆ ನೇತೃತ್ವವಹಿಸಿ ಮಾತನಾಡಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಇನ್ನೂ ಬರ ಘೋಷಿಸದೇ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಜನರ ಸಂಕಷ್ಟ ಆಲಿಸಬೇಕಾದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಪುಟ ರಚನೆಗೆ ದೆಹಲಿಯ ರಾಹುಲ್ ಗಾಂಧಿ ಮನೆ ಕಾದು ಕುಳಿತಿದ್ದಾರೆ.

ಮುಖ್ಯ ಮಂತ್ರಿ ಆಗಿ ಎರಡು ತಿಂಗಳು ಕಳೆದರೂ ರಾಜ್ಯದಲ್ಲಿ ಕೃಷಿ ಮಂತ್ರಿ ಇಲ್ಲ, ತೀವ್ರ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಸರ್ಕಾರ ಇನ್ನೂ ಬರ ಘೋಷಿಸದೇ ರೈತರ



ವಿರೋಧಿ ನೀತಿ ಪಟ್ಟ ಕಟ್ಟಿಕೊಂಡರೆ, ರೈತರ ಬಗ್ಗೆ ಕಾಳಜಿ ಇದ್ದರೆ ಸರ್ಕಾರ ಕೂಡಲೇ ಯಲಬುರ್ಗಾ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಿ ಒಂದು ಎಕರೆ ಗೆ 50 ಸಾವಿರ ಪರಿಹಾರ ನೀಡುವುದಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು. ಒಂದು ವೇಳೆ ವಿಳಂಬ ಮಾಡಿದರೆ ಕ್ಷೇತ್ರದ ರೈತರ ಜೊತೆ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

> **ಯಲಬುರ್ಗಾ ಕ್ಷೇತ್ರದ ರೈತರು ವಿಂಡ ಫ್ಯಾನ್ ಹಾಗೂ ಸೋಲಾರ್ ಕಂಪನಿಗಳಿಗೆ ಭೂಮಿಯನ್ನು ಕೊಡಬೇಡಿ ಮಧ್ಯವರ್ತಿಗಳು ದೊಡ್ಡ ಪ್ರಮಾಣದಲ್ಲಿ ದುಡ್ಡು ತಿಂದು ರೈತರಿಗೆ ಕಡಿಮೆ ಪರಿಹಾರ ನೀಡಿದ್ದಾರೆ. ಈಗ ಭೂಮಿ ಕಳೆದುಕೊಂಡರೆ ಮುಂದೆ ಭೂಮಿ ಪಡೆಯುವುದು ಕಷ್ಟ ಕ್ಷೇತ್ರದ ಶಾಸಕರು ರೈತರ ಪರ ಇಲ್ಲ, ಅವರ ಬೆಂಬಲಿಗರಿಂದ ಹಾಗೂ ಪೊಲೀಸ್ ಇಲಾಖೆರವರಿಂದ ದುರುಪಯೋಗ ಪಡಿಸಿಕೊಂಡು ರೈತರ ಮೇಲೆ ಕಂಪನಿಯ ಮಧ್ಯವರ್ತಿಗಳ ಮೂಲಕ ಸುಳ್ಳು ಪ್ರಕರಣ ದಾಖಲು ಮಾಡುತ್ತಿದ್ದಾರೆ. ಪೊಲೀಸರು ಕಂಪನಿಯ ಪರವಾಗಿ ಕೆಲಸ ಮಾಡುವುದನ್ನು ಬಿಡಬೇಕು.**
>
> **ಸಿಎಚ್ ಪೊಲೀಸ್ ಪಾಟೀಲ್,ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು.**

ಮಹಾರಾಷ್ಟ್ರದಲ್ಲಿ ನಿರಂತರ ಮಳೆ ಆಗಿದ್ದರಿಂದ ಕೃಷ್ಣ ನದಿ ತುಂಬಿದೆ ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸುವ ಸಾಮರ್ಥ್ಯ ಕ್ಷೇತ್ರದ ಶಾಸಕರಿಗೆ ಇಲ್ಲ, ಕೇವಲ ಪತ್ರ ಬರೆದರೆ ಸಾಲದು ಪತ್ರಗಳನ್ನು ಯಾರು ಬೇಕಾದರೂ ಬರೆಯುತ್ತಾರೆ ನಿಮಗೆ ಕ್ಷೇತ್ರದ ರೈತರ ಬಗ್ಗೆ ಕಾಳಜಿ ಇಲ್ಲ ನಿಮಗೆ ಮತ ನೀಡಿದ ರೈತರು ಮುಂದಿನ ದಿನಮಾನಗಳಲ್ಲಿ ತಕ್ಕ ಪಾಠ ಕಲಿಸುತ್ತಾರೆ ಎಂದರು.

ನಂತರ ಜೆಡಿಎಸ್ ಪಕ್ಷದ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರು ಮಾತನಾಡಿ ಕ್ಷೇತ್ರದ ಶಾಸಕರು ಯಲಬುರ್ಗಾ ತಾಲೂಕನ್ನು ಅಭಿವೃದ್ಧಿ ಮಾಡಲು ಶಾಸಕರಾಗಿಲ್ಲ ತಮ್ಮ ಹುನಗುಂದದ ಹಿಂಬಾಲಕರ ಮೂಲಕ ಸಿಸಿ ರಸ್ತೆ, ಬಿಲ್ಡಿಂಗ್ ಕಟ್ಟುವದಕ್ಕೆ ಶಾಸಕರಾಗಿದ್ದಾರೆ. ಕ್ಷೇತ್ರದಲ್ಲಿ 2018ರ ಮೈತ್ರಿ ಸರ್ಕಾರದಲ್ಲಿ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಕ್ಷೇತ್ರದ ಮಾಜಿ ಶಾಸಕರಾದ ಹಾಲಪ್ಪ ಆಚ–ರ್ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ ಕ್ಷೇತ್ರದ 76 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿ ರೈತ ನಾಯಕ ಆಗಿದ್ದಾರೆ ಎಂದರು. ಪ್ರತಿಭಟನೆಯ ಸಂದರ್ಭದಲ್ಲಿ ಕಾಂಗ್ರೆಸ್ ವಿರೋಧಿ ನೀತಿ ಪತ್ರ ಹಿಡಿದು ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಭಾಜಪ ಜಿಲ್ಲಾ ಅಧ್ಯಕ್ಷ ನವೀನ ಕುಮಾರ್ ಗುಳಗಣ್ಣವರ ತಾಲೂಕ ಅಧ್ಯಕ್ಷ ಮಾರುತಿ ಗಾವರಾಳ ಮಾತನಾಡಿದರು. ಪಕ್ಷದ ಹಿರಿಯ ಮುಖಂಡ ಬಸಲಿಂಗಪ್ಪ ಭೂತೆ, ಬಸವರಾಜ ಗೌರಾ, ಕಲ್ಲೇಶಪ್ಪ ಕರಮುಡಿ, ಸುರೇಶ ಹೊಸಳ್ಳಿ, ಹನುಮಂತ ನಾಯಕ ಹಾಗೂ ಪಕ್ಷದ ಮಹಿಳಾ ಮುಖಂಡರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಇದ್ದರು.

# ಕೆಟ್ಟ ವ್ಯಸನಗಳಿಗೆ ದಾಸರಾಗದಿರಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ.

ಅ.ಶ. ಸುದ್ದಿ ಚಿಕ್ಕಬಳ್ಳಾಪುರ

**ಚಿಕ್ಕಬಳ್ಳಾಪುರ: ಮದ್ಯಪಾನ, ತಂಬಾಕು ಹಾಗೂ ಮಾದಕ ವಸ್ತುಗಳಂತಹ ಕೆಟ್ಟ ವ್ಯಸನಗಳು ವ್ಯಕ್ತಿಯ ಆರೋಗ್ಯ, ಕುಟುಂಬ ಮತ್ತು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತವೆ. ಆದ್ದರಿಂದ ಯಾವುದೇ ದುಷ್ಟಚಟಗಳಿಗೆ ದಾಸರಾಗದೆ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಅವರು ಕರೆ ನೀಡಿದರು.**

ಚಿಕ್ಕಬಳ್ಳಾಪುರ ತಾಲ್ಲೂಕಿನ ಗುವ್ವಲಕಾನಹಳ್ಳಿಯ ಸೇಟ್ ದಿನ್ನೆ ಸಮೀಪದ ಶ್ರೀನಿವಾಸ್ ಸಪ್ಲೈ ಚೈನ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಶ್ರೀ ಮ.ನಿ.ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ "ವ್ಯಸನಮುಕ್ತ ದಿನಾಚರಣೆ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ತಂಬಾಕು ಮತ್ತು ಮದ್ಯದ ಬೆಲೆಗಳು ಹೆಚ್ಚಾಗುತ್ತಿದ್ದರೂ ಅವುಗಳ ಬಳಕೆದಾರರ ಸಂಖ್ಯೆ ಕಡಿಮೆಯಾಗದೇ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಸಿಗರೇಟ್ ಪ್ಯಾಕ್ ಮೇಲೆ ಕ್ಯಾನ್ಸರ್ ಕಾರಕಗಳು ಎನ್ನುವ ಹಾಗೆ ಚಿತ್ರಗಳನ್ನು ಹಾಗೂ ಅನಾರೋಗ್ಯಕರ ಎಂದು ಬರೆದಿರುತ್ತದೆ ಬಳಕೆದಾರರು ಇದರ ಬಗ್ಗೆ ವಿವೇಚಿಸಬೇಕು ಎಂದು ಕಿವಿ ಮಾತು ಹೇಳಿದರು.



ಪ್ರತಿಯೊಬ್ಬ ವ್ಯಕ್ತಿಯೂ ಯಾವುದೋ ಒಂದು ವಿಷಯದ ಬಗ್ಗೆ ಆಸಕ್ತಿ ಅಥವಾ ವ್ಯಸನ ಹೊಂದಿರುತ್ತಾನೆ. ಕೆಲವರು ಕ್ರೀಡೆ, ಸಂಗೀತ, ಸಾಹಿತ್ಯ, ವ್ಯಾಯಾಮ ಮತ್ತು ಉದ್ಯೋಗದಂತಹ ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಆದರೆ ಕೆಲವರು ಅನಿವಾರ್ಯ ಕಾರಣಗಳು ಹಾಗೂ ಕೆಟ್ಟ ಸಹವಾಸಗಳಿಂದ ಮದ್ಯಪಾನ, ತಂಬಾಕು ಮತ್ತು ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗುತ್ತಾರೆ ಎಂದು ವಿಷಾದಿಸಿದರು.

ಡಾ. ಮಹಾಂತ ಶಿವಯೋಗಿಗಳು ಹಲವು ದಶಕಗಳ ಹಿಂದೆಯೇ ಸಮಾಜದಲ್ಲಿನ ದುಷ್ಟಚಟಗಳನ್ನು ನಿರ್ಮೂಲನೆಗೊಳಿಸುವ ಉದ್ದೇಶದಿಂದ ನಡೆಸಿದ ಜಾಗೃತಿ ಕಾರ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಆದರ್ಶಗಳನ್ನು ಅನುಸರಿಸಿ ಪ್ರತಿಯೊಬ್ಬರೂ ಉತ್ತಮ ಅಭ್ಯಾಸಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆರೋಗ್ಯಕರ ಜೀವನವೇ ವ್ಯಕ್ತಿಯ ಕೌಶಲ್ಯ, ದಕ್ಷತೆ ಮತ್ತು ವೃತ್ತಿಪರ ಯಶಸ್ಸಿಗೆ ಆಧಾರವಾಗಿದ್ದು, ಯುವಜನತೆ ತಮ್ಮ ಪ್ರತಿಭೆಯನ್ನು ದೇಶದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಡಿ.ಹೆಚ್. ಅಶ್ವಿನ್ ಅವರು ಮಾತನಾಡಿ ಮಾನವ ಜೀವನ ಅಮೂಲ್ಯವಾದದ್ದು.

ಅದನ್ನು ಮದ್ಯಪಾನ, ಮಾದಕ ವಸ್ತುಗಳು ಮತ್ತು ಇತರ ದುಷ್ಟಚಟಗಳಿಗೆ ಬಲಿಯಾಗಿ ಹಾಳುಮಾಡಿಕೊಳ್ಳಬಾರದು ವ್ಯಸನಗಳಿಗೆ ಯಾರೂ ಕಾರಣರಲ್ಲ, ವ್ಯಕ್ತಿಯ ಸ್ವಂತ ನಿರ್ಧಾರಗಳೇ ಮುಖ್ಯ ಕಾರಣವಾಗುತ್ತವೆ. ಕೆಟ್ಟ ಪ್ರಲೋಭನೆಗಳು, ಸಹವಾಸ ದೋಷ ಮತ್ತು ಅನಾರೋಗ್ಯಕರ ಕುತೂಹಲಗಳಿಂದ ಅನೇಕರು ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಇದರ ಪರಿಣಾಮವಾಗಿ ದೈಹಿಕ ಹಾಗೂ ಮಾನಸಿಕ ಆರೋಗ್ಯ ಹದಗೆಟ್ಟು ಕೆಲವೊಮ್ಮೆ ಮಾರಣಾಂತಿಕ ಕಾಯಿಲೆಗಳಿಗೂ ತುತ್ತಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ತಿಳಿಸಿದರು. ಕುಡಿತದ ಚಟದಿಂದ ಮೃತಪಟ್ಟ ಯುವಕನ ಕುಟುಂಬದ ದುಸ್ಥಿತಿಯನ್ನು ಕಂಡು



ಮನನೊಂದ ಡಾ. ಮಹಾಂತ ಶಿವಯೋಗಿಗಳು "ಮಹಾಂತ ಜೋಳಿಗೆ" ಅಭಿಯಾನ ಆರಂಭಿಸಿ ಸಮಾಜದಲ್ಲಿನ ದುಷ್ಟಚಟಗಳನ್ನು ನಿವಾರಿಸುವ ಮಹತ್ವದ ಕಾರ್ಯ ಕೈಗೊಂಡರು.

ಜನರು ತಮ್ಮ ಮದ್ಯ, ತಂಬಾಕು, ಪಾನ್ ಬೀಡಾ ಹಾಗೂ ಇತರ ವ್ಯಸನಕಾರಿ ವಸ್ತುಗಳನ್ನು ಜೋಳಿಗೆಗೆ ಹಾಕಿ ಇನ್ನು ಮುಂದೆ ಬಳಸುವುದಿಲ್ಲ ಎಂದು ಪ್ರತಿಜ್ಞೆ ಮಾಡುವ ಮೂಲಕ ವ್ಯಸನಮುಕ್ತ ಜೀವನಕ್ಕೆ ಪಾದಾರ್ಪಣೆ ಮಾಡುತ್ತಿದ್ದರು. ಜಾತಿ, ಮತ, ಧರ್ಮ ಮತ್ತು ಭಾಷೆಯ ಭೇದವಿಲ್ಲದೆ ಸುಮಾರು 42 ವರ್ಷಗಳ ಕಾಲ ದೇಶ-ವಿದೇಶಗಳಲ್ಲಿ ಸಂಚರಿಸಿ ವ್ಯಸನಗಳ ಮುಕ್ತಿಗೆ ಭಿಕ್ಷೆ ಬೇಡಿದ ಮಹಾಂತ ಶಿವಯೋಗಿಗಳ ಸೇವೆ ಅಪಾರವಾಗಿದೆ ಎಂದು ಅವರು ಹೇಳಿದರು. ಮನೋವೈದ್ಯೆ ಡಾ. ಲಾವಣ್ಯ ಅವರು ತಂಬಾಕು, ಮಾದಕ ವಸ್ತುಗಳು ಮತ್ತು ಮದ್ಯಪಾನದ ದುಷ್ಪರಿಣಾಮಗಳ ಕುರಿತು ಪವರ್‌ಪಾಯಿಂಟ್ ಪ್ರಾತ್ಯಕ್ಷಿಕೆ (ppt) ಮೂಲಕ ಕಾರ್ಮಿಕರು ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಿದರು. ವ್ಯಸನದಿಂದ ಬಳಲುತ್ತಿರುವವರು ಅಥವಾ ಅಂತಹ ಸಮಸ್ಯೆ ಎದುರಿಸುತ್ತಿರುವವರ ಬಗ್ಗೆ ಮಾಹಿತಿ ಹೊಂದಿರುವವರು ಟೆಲಿಮಾನಸ್ ಸಹಾಯವಾಣಿ 14416 ಅನ್ನು ಸಂಪರ್ಕಿಸಿ ಉಚಿತ ಸಮಾಲೋಚನೆ ಮತ್ತು ಚಿಕಿತ್ಸಾ ನೆರವು ಪಡೆಯಬಹುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಆರೋಗ್ಯ ಇಲಾಖೆ ವತಿಯಿಂದ 200ಕ್ಕೂ ಹೆಚ್ಚು ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಲಾಯಿತು. ಮದ್ಯ, ತಂಬಾಕು ಹಾಗೂ ಮಾದಕ ವಸ್ತುಗಳ ಸೇವನೆಯಿಂದ ದೂರವಿರುವಂತೆ ವ್ಯಸನಮುಕ್ತ ಪ್ರತಿಜ್ಞೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಹೆಚ್.ಸಿ. ಚೇತನ್ ಅವರು ಬೋಧಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಹೆಚ್.ಸಿ. ಚೇತನ್, ಶ್ರೀನಿವಾಸ್ ಸಪ್ಲೈ ಚೈನ್ ಸಲ್ಯೂಷನ್ಸ್ ಸಂಸ್ಥೆಯ ಅಈಔ ಊಗಐ ಕರ್ನಾಟಕ ಅಊಏಊ ರಾಮು, ಆಅಖಇ ಊಗಐ, ಕರ್ನಾಟಕ CHKH ಮಾದಪ್ಪ ಎಂ, ಪುರುಷೋತ್ತಮ್, ಪ್ರಧಾನ ವ್ಯವಸ್ಥಾಪಕ ಲೋಕೇಶ್, ಉಪ ವ್ಯವಸ್ಥಾಪಕ ವೀರೇಂದ್ರ ರೆಡ್ಡಿ ,ಸಿದ್ದಪ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಆರ್. ಮಂಜುನಾಥ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಶಿವಕುಮಾರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಕೃಷ್ಣ ಪ್ರಸಾದ್, ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಪ್ರಕಾಶ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜಿ. ಹರೀಶ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮಂಜುಳ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕಾರ್ಮಿಕರು ಉಪಸ್ಥಿತರಿದ್ದರು.

## ಮೀಸಲಾತಿ ಕುರಿತು ದ್ವೇಷ-ನಿಂದನಾತ್ಮಕ ಹೇಳಿಕೆ; ಪಬ್ಲಿಕ್ ಟಿವಿಯ ಅರುಣ್ ಬಡಿಗೇರ್ ವಿರುದ್ಧ ಬಾಗೇಪಲ್ಲಿಯಲ್ಲಿ ದೂರು ದಾಖಲು.

ಅ.ಶ. ಸುದ್ದಿ ಬಾಗೇಪಲ್ಲಿ

**ಬಾಗೇಪಲ್ಲಿ: ಮೀಸಲಾತಿ ವ್ಯವಸ್ಥೆ ಕುರಿತು ಅವಹೇಳನಕಾರಿ ಹಾಗೂ ದ್ವೇಷ ಪ್ರಚೋದಿಸುವ ರೀತಿಯಲ್ಲಿ ಮಾತನಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಪಬ್ಲಿಕ್ ಟಿವಿಯ ಆಂಕರ್ ಅರುಣ್ ಬಡಿಗೇರ್ ವಿರುದ್ಧ ಬಾಗೇಪಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಹಾಗೂ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು ಗಡಿಪಾರು ಮಾಡಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಎಂ.ಜಿ.ಕಿರಣ್ ಕುಮಾರ್ ಒತ್ತಾಯಿಸಿದರು. ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಪತ್ರಕಾ ಹೇಳಿಕೆ ಬಿಡುಗಡೆ ಮಾಡಿ ಮಾತನಾಡಿದರು.**




ದೂರುದಾರರ ಪ್ರಕಾರ, ಜುಲೈ 25ರಂದು ಪ್ರಸಾರವಾದ ಪಬ್ಲಿಕ್ ಟಿವಿಯ 'ಬಿಗ್ ಬುಲೆಟಿನ್' ಕಾರ್ಯಕ್ರಮದಲ್ಲಿ ಅರುಣ್ ಬಡಿಗೇರ್ ಅವರು ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST) ಹಾಗೂ ಇತರ ಹಿಂದುಳಿದ ವರ್ಗಗಳಿಗೆ (OBC) ನೀಡಲಾಗಿರುವ ಮೀಸಲಾತಿ ವ್ಯವಸ್ಥೆಯನ್ನು ಟೀಕಿಸುವ ಸಂದರ್ಭದಲ್ಲಿ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಆರೋಪಿಸಿದರು. ಪಬ್ಲಿಕ್ ಟಿವಿಯ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಆಗಿರುವ ಕಾರ್ಯಕ್ರಮದ ವಿಡಿಯೋದ 00:05:36 ರಿಂದ 00:06:23 ಅವಧಿಯಲ್ಲಿ ಅವರು ಮೀಸಲಾತಿ ಪಡೆದವರು ಕಡಿಮೆ ಅಂಕಗಳನ್ನು ಪಡೆದು ಶಿಕ್ಷಕರು, ವೈದ್ಯರು ಹಾಗೂ ಇಂಜಿನಿಯರ್‌ಗಳಾಗುವುದರಿಂದ ಗುಣಮಟ್ಟ ಕುಸಿಯುತ್ತದೆ ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಹೇಳಿಕೆಗಳು ಮೀಸಲಾತಿ ವ್ಯವಸ್ಥೆ ಹಾಗೂ ಅದರ ಫಲಾನುಭವಿಗಳ ಬಗ್ಗೆ ಸಮಾಜದಲ್ಲಿ ತಪ್ಪು ಕಲ್ಪನೆ ಮತ್ತು ದ್ವೇಷವನ್ನು ಉಂಟುಮಾಡುವ ಸಾಧ್ಯತೆ ಇದೆ ಎಂದು ದೂರುದಾರರು ಆರೋಪಿಸಿದ್ದಾರೆ. ದೂರುದಾರರು, ಮೀಸಲಾತಿ ವ್ಯವಸ್ಥೆಯು ಭಾರತದ ಸಂವಿಧಾನವು ಕಲ್ಪಿಸಿರುವ ಸಾಮಾಜಿಕ ನ್ಯಾಯದ ಒಂದು ಪ್ರಮುಖ ಸಾಧನವಾಗಿದ್ದು, ಅದರ ಬಗ್ಗೆ ಅವಹೇಳನಕಾರಿ ಹೇಳಿಕೆಗಳು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ಉಂಟುಮಾಡುವ ಸಾಧ್ಯತೆಯಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಅಲ್ಲದೆ, ಅರುಣ್ ಬಡಿಗೇರ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದ್ದಾರೆ. ಒಂದುವೇಳೆ ಅರುಣ್ ಬಡಿಗೇರ್ ವಿರುದ್ಧ ಕಾನೂನು ಹಾಗೂ ಶಿಸ್ತಿನಕ್ರಮ ಕೈಗೊಳ್ಳದೇ ಇದ್ದಲ್ಲಿ ಕರ್ನಾಟಕ ರಾಜ್ಯಾದ್ಯಂತ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಇತರೆ ಸಂಘಟನೆಗಳು ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಚಲಪತಿ,ಪರಗೋಡು , ಪೆದ್ದರೆಡ್ಡಿಪಲ್ಲಿ ಶ್ರೀರಾಮ,ವೆಂಕಟೇಶ್ ನಂಜುಂಡಪ್ಪ, ನಾಗೇಶ್, ಮುರಳಿ, ಶ್ರೀನಿವಾಸ್, ನರಸಿಂಹಪ್ಪ,ಕೇಶವ, ರಾಮಾಂಜಿ ಇತರರು ಹಾಜರಿದ್ದರು.

# ಗ್ರಾಮೀಣ ಭಾಗದ ಜನರ ಆರೋಗ್ಯ ಸುಧಾರಣೆಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ.

ಅ.ಶ. ಸುದ್ದಿ ಚಿಕ್ಕಬಳ್ಳಾಪುರ

**ಚಿಕ್ಕಬಳ್ಳಾಪುರ: ತಾಲ್ಲೂಕಿನ ಚಿಕ್ಕ ಕಾಡಿಗೇನಹಳ್ಳಿಯಲ್ಲಿ ಬೆಂಗಳೂರಿನ ಈಸ್ಟ್ ಪಾಯಿಂಟ್ ಆಸ್ಪತ್ರೆಯ ಸಹಕಾರದೊಂದಿಗೆ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಶನಿವಾರ ಆಯೋಜಿಸಲಾಯಿತು.**

ಕಳೆದ ಎರಡು ವಾರಗಳಿಂದ ಪ್ರತಿ ಶನಿವಾರ ವಿವಿಧ ಗ್ರಾಮಗಳಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸುತ್ತಿರುವ ಟ್ರಸ್ಟ್, ಪೇರೇಸಂದ್ರ ಹಾಗೂ ಜಾತವಾರ ನಂತರ ಇಂದು ತಾಲೂಕಿನ ಚಿಕ್ಕ ಕಾಡಿಗೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಶಿಬಿರವನ್ನು ಏರ್ಪಡಿಸಿತ್ತು. ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಹೃದಯ, ಕಣ್ಣು, ಮೂಳೆ, ಕಿವಿ-ಮೂಗು-ಗಂಟಲು ಹಾಗೂ ಚರ್ಮರೋಗ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ವೈದ್ಯಕೀಯ ಸಲಹೆ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ,ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ



ಕೈಜೋಡಿಸಬೇಕು.ಬಡವರು ಮತ್ತು ಗ್ರಾಮೀಣ ಜನರು ವೈದ್ಯಕೀಯ ವೆಚ್ಚವನ್ನು ಭರಿಸಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ಇದೆ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದರು. ಗ್ರಾಮೀಣ ಪ್ರದೇಶಗಳ ಬಡವರು,ವೃದ್ಧರು ಹಾಗೂ ಸಾಮಾನ್ಯ ಜನರ ಆರೋಗ್ಯ ಸುಧಾರಣೆಗೆ ಟ್ರಸ್ಟ್ ಬದ್ಧವಾಗಿದೆ.ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಅಭಿವೃದ್ಧಿಯಿಂದ ಮಾತ್ರ ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ ಎಂಬ ನಂಬಿಕೆಯಿಂದ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.

ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಇಂತಹ ಆರೋಗ್ಯ ಶಿಬಿರಗಳನ್ನು ನಡೆಸುವ ಉದ್ದೇಶವಿದೆ ಎಂದು ಹೇಳಿದರು ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಮಂಗಳವಾರ ಬೆಂಗಳೂರಿನ ಈಸ್ಟ್ ಪಾಯಿಂಟ್ ಆಸ್ಪತ್ರೆಗೆ ಕರೆದೊಯ್ದು,ಶಸ್ತ್ರಚಿಕಿತ್ಸೆ ಪೂರ್ಣಗೊಂಡ ಬಳಿಕ ಮರಳಿ ಕರೆತರುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಶಿಬಿರದ ವೇಳೆ ಸಂದೀಪ್ ರೆಡ್ಡಿ ಅವರು ಹಿರಿಯ ನಾಗರಿಕರ ಆರೋಗ್ಯ ವಿಚಾರಿಸಿ, ಅಗತ್ಯವಿದ್ದವರಿಗೆ ವಾಕಿಂಗ್ ಸ್ಟಿಕ್ ಹಾಗೂ ದೃಷ್ಟಿ ಸಮಸ್ಯೆ ಹೊಂದಿದ್ದವರಿಗೆ ಉಚಿತ ಕನ್ನಡಕಗಳನ್ನು ವಿತರಿಸಿದರು. ಆರೋಗ್ಯ ಶಿಬಿರಕ್ಕೆ ಸಹಕರಿಸಿದ ಸ್ನೇಹಿತರ ಬಳಗ ಹಾಗೂ ಶಿಬಿರದ ಬಗ್ಗೆ ಪ್ರಚಾರ ನಡೆಸಿದ ಆಟೋ ಚಾಲಕರಿಗೆ ಅವರು ಧನ್ಯವಾದಗಳನ್ನು ತಿಳಿಸಿದರು. ರೋಗಿಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸುವುದರ ಜೊತೆಗೆ ಅಗತ್ಯವಿದ್ದವರಿಗೆ ಕನ್ನಡಕ ಹಾಗೂ ವಾಕಿಂಗ್ ಸ್ಟಿಕ್‌ಗಳನ್ನು ನೀಡಲಾಯಿತು.

ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿರುವ ಸಂದೀಪ್ ಬಿ. ರೆಡ್ಡಿ ಅವರ ಸೇವಾ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು ಈ ಸಂದರ್ಭದಲ್ಲಿ ಪಟ್ರೇನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ವೆಂಕಟೇಶ್, ಮಂಚೇನಹಳ್ಳಿ ರಿಯಾಝ್,ಕಣಜೇನಹಳ್ಳಿ ಸುಹಾಸ್,ಶ್ರೀರಾಮಪುರ ಶಶಿ,ರಘು,ಶ್ರೀ ಕಾಂತ್,ಹರೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಣ್ಣು ಪರೀಕ್ಷೆಯ ಮಹತ್ವ ಕುರಿತು ಅರಿವು ಕಾರ್ಯಕ್ರಮ



ಅ.ಶ. ಸುದ್ದಿ ಕೋಲಾರ

**ಕೋಲಾರ/ಶ್ರೀನಿವಾಸಪುರ: ರೇಷ್ಮೆ ಕೃಷಿ ವಿಶ್ವವಿದ್ಯಾಲಯ ಚಿಂತಾಮಣಿಯ ಅಂತಿಮ ವರ್ಷದ ಬಿ.ಎಸ್ಸಿ ಕೃಷಿ ವಿದ್ಯಾರ್ಥಿಗಳು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಚಾಕೇಪಲ್ಲಿ ಗ್ರಾಮದಲ್ಲಿ 'ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ'ದ ಅಂಗವಾಗಿ ಬುಧವಾರ 'ಗ್ರಾಮೀಣ ಸಾಮೂಹಿಕ ಸಭೆ ಹಾಗೂ ಮಣ್ಣು ಪರೀಕ್ಷೆಯ ಮಹತ್ವ' ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಂಡಿದ್ದರು.**

ಗ್ರಾಮ ದೇವತೆ ಚೌಡೇಶ್ವರಿ ದೇವಿ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಈ ಸಭೆಯಲ್ಲಿ ಕೃಷಿ ವಿದ್ಯಾರ್ಥಿಗಳು ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ, ಮಣ್ಣು ಪರೀಕ್ಷೆಯ ಮಹತ್ವ ಕುರಿತು ಮಾಹಿತಿ ನೀಡಿದರು. ಮಣ್ಣಿನ ಮಾದರಿಯನ್ನು ವೈಜ್ಞಾನಿಕವಾಗಿ ಹೇಗೆ ಸಂಗ್ರಹಿಸಬೇಕು ಮತ್ತು ಪ್ರಯೋಗಾಲಯಕ್ಕೆ ಹೇಗೆ ಕಳುಹಿಸಿಕೊಡಬೇಕು ಎಂಬುದನ್ನು ರೈತರಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ರೇಷ್ಮೆ ಕೃಷಿ ಮಹಾವಿದ್ಯಾಲಯ ಚಿಂತಾಮಣಿಯ ಕೃಷಿ ವಿಸ್ತರಣಾ ವಿಭಾಗದ ಪ್ರಾಧ್ಯಾಪಕಿ ಡಾ. ಸುನೀತಾ, ಸಂಯೋಜಕರಾದ ಡಾ. ನರಸಾರೆಡ್ಡಿ ಜಿ, ಡಾ. ಸಾಗರ್, ಡಾ. ಪೂಜಾ ಕೋಲಾರ, ಮಣ್ಣು ವಿಜ್ಞಾನ ವಿಭಾಗದ ಡಾ. ನಳಿನ ಹಾಗೂ ಆಹಾರ ವಿಜ್ಞಾನ ಪ್ರಾಧ್ಯಾಪಕಿ ಪೂಜಾ ಕೋಲಾರ ಸೇರಿದಂತೆ ಕೃಷಿ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಆಗಸ್ಟ್ 2ರಂದು ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಲಿಖಿತ ಪರೀಕ್ಷೆ: ಅಕ್ರಮ ಎಸಗಿದರೆ ಕಠಿಣ ಶಿಕ್ಷೆ ಜಿಲ್ಲಾಧಿಕಾರಿ ಜಿ. ಪ್ರಭು

ಅ.ಶ. ಸುದ್ದಿ ಚಿಕ್ಕಬಳ್ಳಾಪುರ

**ಚಿಕ್ಕಬಳ್ಳಾಪುರ: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಖಾಲಿ ಇರುವ ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದ ಲಿಖಿತ ಪರೀಕ್ಷೆಯು ಆಗಸ್ಟ್ 2ರಂದು (ಭಾನುವಾರ) ಜಿಲ್ಲೆಯ 9 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಅಕ್ರಮಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ. ಪ್ರಭು ಅವರು ಎಚ್ಚರಿಕೆ ನೀಡಿದ್ದಾರೆ.**

ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರೀಕ್ಷಾ ಅಭ್ಯರ್ಥಿಗಳು ಯಾವುದೇ ರೀತಿಯ ಅಕ್ರಮಗಳಲ್ಲಿ ಭಾಗಿಯಾದರೆ 5 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ರೂ.10 ಲಕ್ಷದವರೆಗೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಯಾವುದೇ ಸಕ್ಷಮ ಪ್ರಾಧಿಕಾರ, ಸಂಘಟನೆ, ಗುಂಪು ಅಥವಾ ಸಂಸ್ಥೆ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವುದು ದೃಢಪಟ್ಟರೆ 12 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ರೂ.15 ಲಕ್ಷದವರೆಗೆ ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಪರೀಕ್ಷೆಯ ಪಾರದರ್ಶಕತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ವ್ಯಾಪಕ ಸಿದ್ಧತೆಗಳನ್ನು ಕೈಗೊಂಡಿವೆ.

ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಸುರಕ್ಷಿತವಾಗಿ ಸಾಗಿಸಲು ಹಾಗೂ ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳ ಒಎಂಆರ್ ಪ್ರತಿಗಳನ್ನು ಕೆಇಎ (KEA) ಸೆಲ್‌ಗೆ ಪೊಲೀಸ್ ಕಣ್ಗಾವಲಿನಲ್ಲಿ ತಲುಪಿಸಲು ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಜೊತೆಗೆ ಜಾಗೃತಿ ದಳ ಮತ್ತು ವಿಚಕ್ಷಣ ದಳಗಳನ್ನು ರಚಿಸಿ ಪರೀಕ್ಷಾ ಪ್ರಕ್ರಿಯೆಯ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ ಎಂದು ತಿಳಿಸಿದರು. ಜಿಲ್ಲೆಯ 9 ಪರೀಕ್ಷಾ ಕೇಂದ್ರಗಳಲ್ಲಿನ ಎಲ್ಲ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಭಾರತೀಯ ನ್ಯಾಯ ಸಂಹಿತೆ (ಃಓಖ) ಕಾಯ್ದೆಯಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಅನಧಿಕೃತ ವ್ಯಕ್ತಿಗಳ ಪ್ರವೇಶ ಹಾಗೂ ಗುಂಪು ಸೇರುವಿಕೆಯನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಸಂವಹನ ಸಾಧನಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

ಪರೀಕ್ಷೆಯು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ನಡೆಯಲಿದ್ದು, ಅಭ್ಯರ್ಥಿಗಳು ಕಡ್ಡಾಯವಾಗಿ ಬೆಳಗ್ಗೆ 8 ಗಂಟೆಯೊಳಗೆ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಬೇಕು. ಭದ್ರತಾ ತಪಾಸಣೆಯ




ನಂತರವೇ ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ನೀಡಲಾಗುತ್ತದೆ. ಪರೀಕ್ಷಾ ಸಮಯದಲ್ಲಿ ಶಿಸ್ತು, ಸಮಯಪಾಲನೆ ಮತ್ತು ವಸ್ತ್ರಸಂಹಿತೆ ಪಾಲನೆ ಕಡ್ಡಾಯವಾಗಿದ್ದು, ಅಭ್ಯರ್ಥಿಗಳು ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (KEA) ನಿರ್ದೇಶನದಂತೆ ಪರೀಕ್ಷಾ ಕೇಂದ್ರಗಳಿಗೆ ಪ್ರವೇಶಿಸುವ ಮುನ್ನ ಕಟ್ಟುನಿಟ್ಟಿನ ತಪಾಸಣೆ ನಡೆಯಲಿದೆ. ಚೀಟಿಗಳು, ಮೊಬೈಲ್ ಫೋನ್, ಕ್ಯಾಲ್ಕುಲೇಟರ್, ಬ್ಲೂಟೂತ್ ಸಾಧನಗಳು, ಇಯರ್‌ಫೋನ್, ಕೈಗಡಿಯಾರ, ಪೆನ್‌ಡ್ರೈವ್, ಕ್ಯಾಮೆರಾ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಸಾಧನಗಳನ್ನು ಪರೀಕ್ಷಾ ಕೇಂದ್ರದೊಳಗೆ ತರಲು ಅವಕಾಶವಿರುವುದಿಲ್ಲ. ನಿಷೇಧಿತ ವಸ್ತುಗಳನ್ನು ಹೊಂದಿರುವುದು ಕಂಡುಬಂದರೆ ತಕ್ಷಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಅಭ್ಯರ್ಥಿಗಳು ಉದ್ದ ತೋಳಿನ ಉಡುಪು ಧರಿಸಬಾರದು.

ಕಿವಿ, ತಲೆ ಹಾಗೂ ಮುಖವನ್ನು ಸಂಪೂರ್ಣ ಮುಚ್ಚುವ ರೀತಿಯ ಉಡುಪುಗಳನ್ನು ಧರಿಸಿ ಬರಬಾರದು. ಮೂಗುತಿ ಮತ್ತು ಮಂಗಳಸೂತ್ರವನ್ನು ಹೊರತುಪಡಿಸಿ ಇತರೆ ಲೋಹದ ಆಭರಣಗಳನ್ನು ಧರಿಸಲು ಅವಕಾಶವಿಲ್ಲ. ಶೂ ಧರಿಸಿ ಪರೀಕ್ಷಾ ಕೇಂದ್ರ ಪ್ರವೇಶಿಸಲು ಸಹ ಅನುಮತಿ ಇರುವುದಿಲ್ಲ. ಧಾರ್ಮಿಕ ಉಡುಪು ಧರಿಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳು ಪರೀಕ್ಷೆ ಆರಂಭಕ್ಕೂ ಎರಡು ಗಂಟೆಗಳ ಮುನ್ನ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ವಿಶೇಷ ಭದ್ರತಾ ತಪಾಸಣೆಗೆ ಒಳಗಾಗಬೇಕು. ಜನಿವಾರ ಮತ್ತು ಶಿವದಾರ ಧರಿಸಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಪರೀಕ್ಷೆಯನ್ನು ಎದುರಿಸಲು 4,526 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳು ತಮ್ಮ ಪ್ರವೇಶಾನುಮತಿ ಪತ್ರದಲ್ಲಿರುವ ಸೂಚನೆಗಳನ್ನು ತಪ್ಪದೇ ಪಾಲಿಸಿ, ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿ ಸಹಕರಿಸುವಂತೆ ಮನವಿ ಮಾಡಿದ ಜಿಲ್ಲಾಧಿಕಾರಿಗಳು ಎಲ್ಲಾ ಅಭ್ಯರ್ಥಿಗಳಿಗೆ ಶುಭ ಹಾರೈಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಅವರು ಮಾತನಾಡಿ, ಎಲ್ಲಾ ಪರೀಕ್ಷಾ ಕೇಂದ್ರಗಳು ಹಾಗೂ ಪರೀಕ್ಷಾ ಕೊಠಡಿಗಳಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಸಂವಹನ ಸಾಧನಗಳನ್ನು ನಿಷ್ಕ್ರಿಯಗೊಳಿಸಲು ಜಾಮರ್‌ಗಳನ್ನು ಅಳವಡಿಸಲಾಗಿದ್ದು, ವೆಬ್‌ಕಾಸ್ಟಿಂಗ್ ಮೂಲಕ ನಿರಂತರ ನಿಗಾ ವಹಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳ ಮೇಲೂ ವಿಶೇಷ ನಿಗಾ ಇಡಲಾಗಿದ್ದು, ಯಾವುದೇ ರೀತಿಯ ವದಂತಿ ಅಥವಾ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಎಲ್ಲ ರೀತಿಯ ಭದ್ರತಾ ಹಾಗೂ ಮೇಲ್ವಿಚಾರಣಾ ಕ್ರಮಗಳನ್ನು ಕೈಗೊಳ್ಳಲಾಗಿರುವುದರಿಂದ ಪರೀಕ್ಷೆಯು ಶಾಂತಿಯುತವಾಗಿ, ಪಾರದರ್ಶಕವಾಗಿ ಹಾಗೂ ಸುಸೂತ್ರವಾಗಿ ನಡೆಯಲಿದೆ ಎಂಬ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದರು. ಪರೀಕ್ಷೆಯ ಯಶಸ್ವಿ ನಿರ್ವಹಣೆಗೆ ಅಭ್ಯರ್ಥಿಗಳು ಹಾಗೂ ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಜಿಲ್ಲಾಡಳಿತದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ,ಅಪರ ಜಿಲ್ಲಾಧಿಕಾರಿ ಡಾ. ಎನ್ ಭಾಸ್ಕರ್, ಪದವಿಪೂರ್ವ ಶಿಕ್ಷಣ ಇಲಾಖೆಯ ಪಂಡರಿನಾಥ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ್ ಸೇರಿದಂತೆ ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆಯಾಗಿರುವ ಮಾರ್ಗ ಅಧಿಕಾರಿಗಳು ಹಾಜರಿದ್ದರು.

# ಲೇಖಕರ ದಿನಚರಿ...

## ಎಲ್ಲ ಕನ್ನಡ ಕನ್ನಡ

ನಮ್ಮ ಹೃದಯದಿ ಮಿಡಿವ ಕನ್ನಡ,
ನಮ್ಮ ನಾಲಿಗೆ ನುಡಿವ ಕನ್ನಡ,
ನಮ್ಮ ನಲ್ಮೆಯ ನಾಡು ಕನ್ನಡ,
ಎಲ್ಲ ಕನ್ನಡ ಕನ್ನಡ ।

ಬೇಂದ್ರೆ ಬರೆದು, ಬೆಳೆದ ಕನ್ನಡ,
ಕುವೆಂಪು ನುಡಿಯಲಿ ನಲಿದ ಕನ್ನಡ,
ನಿಸಾರ, ಅಡಿಗರರಳಿಸಿದ ಕನ್ನಡ,
ಎಲ್ಲ ಕನ್ನಡ, ಕನ್ನಡ ।

ವಿಶ್ವೇಶ್ವರಯ್ಯರ ಕಾಯಕದ ಕನ್ನಡ,
ರಾಜಕುಮಾರರಭಿನಯದ ಕನ್ನಡ,
ಭೀಮಸೇನರ ಗಾಯನದ ಕನ್ನಡ,
ಎಲ್ಲ ಕನ್ನಡ, ಕನ್ನಡ ।

ಹಂಪೆ–ಹಳೆಬೀಡ ಕಲೆಯಲ್ಲಿ ಕನ್ನಡ,
ಕಾವೇರಿ–ತುಂಗೆಯ ಅಲೆಯಲ್ಲಿ ಕನ್ನಡ,
ಸಹ್ಯಾದ್ರಿ ಕಾನನದ ಚೆಲುವಲ್ಲಿ ಕನ್ನಡ,
ಎಲ್ಲ ಕನ್ನಡ, ಕನ್ನಡ ।

–ಕವಿತಾ ಮೇಗೂರು

## ಕನ್ನಡಮ್ಮನ ಹರಕೆ

ಕನ್ನಡಕ್ಕೆ ಹೋರಾಡು
ಕನ್ನಡದ ಕಂದಾ;
ಕನ್ನಡವ ಕಾಪಾಡು
ನನ್ನ ಆನಂದ
ಜೋಗುಳದ ಹರಕೆಯಿದು
ಮರೆಯದಿರು, ಚಿನ್ನಾ;
ಮರೆತೆಯಾದರೆ ಅಯ್ಯೋ
ಮರೆತಂತೆ ನನ್ನ!

ಮೊಲೆಯ ಹಾಲೆಂತಂತೆ
ಸವಿಜೇನು ಬಾಯ್ಗೆ;
ತಾಯಿಯಪ್ಪುಗೆಯಂತೆ
ಬಲುಸೊಗಸು ಮಯ್ಗೆ;
ಗುರುವಿನೊಳ್ನುಡಿಯಂತೆ
ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ,
ಇಹಪರಗಳೇಳ್ಗೆ!

ರನ್ನ ಪಂಪರ ನೆಚ್ಚು
ಕನ್ನಡದ ಸೊಲ್ಲು;
ಬಸವದೇವನ ಮೆಚ್ಚು,
ಹರಿಹರನ ಗೆಲ್ಲು;

–ಕುವೆಂಪು

## ಇಕ್ಕಳ

ಚಳಿಗಾಲ ಬಂದಾಗ 'ಎಷ್ಟು ಚಳಿ'? ಎಂದರು
ಬಂತಲ್ಲ ಬೇಸಿಗೆ, 'ಕೆಟ್ಟ ಬಿಸಿಲೆ'ಂದರು;
ಮಳೆ ಬಿತ್ತೊ, 'ಬಿಡದಲ್ಲ ಶನಿ!' ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ಚಿಗುರು ಚಿನ್ನದ ನಡುವೆ ಹೂವ ಬಯಸುವರು;
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು;
'ಹಣ್ಣಿನ ಗಾತ್ರ ಪೀಚು' ಎಂದಿವರ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!
ನಿಂತವರ ಕೇಳುವರು; ನೀನೇಕೆ ನಿಂತೆ?
ಮಲಗಿದರೆ ಗೊಣಗುವರು; ನಿನಗಿಲ್ಲ ಚಿಂತೆ?
ಓಡಿದರೆ ಬೆನ್ನ ಹಿಂದೆಯೆ ಇವರ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!

ಓದಿದರೆ ಹೇಳುವರು; ಮತ್ತೊಮ್ಮೆ ಬರೆಯೊ!
ಬರೆದಿಡಲು ಬೆದಕುವರು; ಬರವಣಿಗೆ ಸರಿಯೊ?
ಇವರ ಬಯಕೆಗಳೇನೊ! ಇವರದೇ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!

–ಕೆ. ಎಸ್. ನರಸಿಂಹಸ್ವಾಮಿ

## ಬಾವಿಯಲ್ಲಿ ಚಂದ್ರ

ತಿಂಗಳು ಬೆಳಕಿನ ಇರುಳಿನಲಂದು
ಅಮ್ಮನು ಕೆಲಸದೊಳಿರುತಿರೆ ಕಂಡು
ಗೋಪಿಯು ಪುಟ್ಟುವು ಹೊರಗಡೆ ಬಂದು
ಬಾವಿಗೆ ಇಣುಕಿದರು.

ಬಾವಿಲಿ ಚಂದ್ರನ ಬಿಂಬವ ಕಂಡು
ಚಂದ್ರನು ಬಾವಿಗೆ ಬಿದ್ದನು ಎಂದು
ಅಯ್ಯೋ! ಪಾಪವೆ! ಎನ್ನುತಲೊಂದು
ಕೊಕ್ಕೆಯ ಹುಡುಕಿದರು.

–ಬಿ.ಎಂ. ಶರ್ಮಾ

# ಗುರುತು




ಬಿದಿರು ಕೊಳಲಾದಂತೆ ನೀ ಕರುಣೆ
ಮಡಿಲಾಗು;
ಗೆರೆ ಚಿತ್ರವಾದಂತೆ ನೀ ಬಣ್ಣ ವಾಗು.
ಬೀಜ ಹೂವಾದಂತೆ ನೀ ಚೆಲುವ ಬೀಡಾಗು;
ಆಗು ನೀ ನಗು ಆಗು
ಮುದ್ದುರಾಮ....

ನಗು ಹೇಗೆ ಮೂಡುತ್ತದೆ.. ನಮ್ಮ ಮನದಾಳದಲ್ಲಿ ಚಲು ಚಿತ್ರ ಮೂಡಿದಾಗ, ಬಾಳ ಭಿತ್ತಿಯು ರಂಗಾದಾಗ, ಅಂಚಿತ ಚಿತ್ರವೊಂದು ಚೆಲುವಿನ ಬೀಡಾಗಿ ಮಂದಸ್ಮಿತ ಮೂಡುತ್ತದೆ. ಎಲ್ಲದಕ್ಕೂ ಮನಸೇ ಕಾರಣ. ನಮ್ಮ ಅನುಭವಗಳು ಅನುಭಾವದಾಳಕ್ಕಿಳಿಯುತ್ತವೆ. ಅಂತರ್ಗತವಾದ ಅನುಭೂತಿ ಅಂದವನು ಪಡೆದು ಅಂ–ದುಗೆಯ ಧರಿಸಿ ನಗುವಾಗಿ ಬಾಳಲ್ಲಿ ಹೆಜ್ಜೆ ಇಡುತ್ತದೆ. ಇದು ಅಚ್ಚರಿಯೇ ನಲ್ಲ!!! ಅಜ್ಞತ್ವವಳಿದಾಗ,ಅಹಂಕಾರ ತೊರೆದಾಗ, ಬದುಕು ಮೌಲ್ಯದ ಬೀಡಾಗುತ್ತದೆ.

ನಮ್ಮನ್ನಾವರಿಸಿರುವ ಅಹಂ ಎನ್ನುವ ಅಟ್ಟಾಸುರನ ಅವನತಿಯಾದಾಗ ನಮ್ಮ ಉನ್ನತಿಗಾಗಿ ಮೊದಲಡಿಯನ್ನು ನಾವೆತ್ತಿ ಡುತ್ತೇವೆ. ಅತಿಶಯಿತನಾಗಲು ಮೊದಲು ಅತಿಮೋಹ ತೊರೆಯಬೇಕು. ಸರಳತೆಯ ಪ್ರತಿಬಿಂಬವಾಗಲು ಅಹಮಿಕೆಯ ಗುರುತನ್ನಳಿಸಬೇಕು. ಆಗ ಅತಿವ್ಯಕ್ತ ಸುಂದರತೆ ಅಧಿಗ ತವಾಗುತ್ತದೆ. ಯಾವುದು ಅತಿ ಸರಳವಿದೆಯೋ ಅದು ಅನುಪಲಬ್ಧಿಸದಿರಲು ಅಹಂ ಭಾವವೇ ಕಾರಣ. ಮಾನವನ ನೈಜ–ತೆಗೆ ಅನ್ವರ್ಥವಾಗಿರುವುದನ್ನ ಅನ್ಯತ್ರವೇಕೆ ಅರಸಬೇಕು? ಬದುಕು ಅಪರಾಗದ ಪುಷ್ಪವಾಗುವ ಬದಲು ವರ್ಣರಂಜಿತವಾಗಲು ಉಪಭೋಗಗಳನ್ನ ಸೀಮಿತವಾಗಿರಿಸಿ ನಮ್ಮ ಇತಿಮಿತಿಗಳಿಗೆ ಗೆರೆಯನ್ನು ಎಳೆದು ಬದುಕಿದಾಗ ಸಂತೋಷ ನಮ್ಮನ್ನ ರಸಿಕೊಂಡು ಬರುತ್ತದೆ.


ಪಂಖುರಗಳುದರಿದ ಹೂವಿನಲ್ಲಿ ಯಾವ ಸೌಗಂಧ ಸೌಂದರ್ಯವಿರುತ್ತದೆ. ಹರುಷ ಬದುಕಿನ ಅಪೂರ್ವಾರ್ಥಲಬ್ಧಿ. ಬದುಕಿನ ಏರಿಳಿತಗಳಿಗೆ ಅಪ್ಪಳಿಸಿ ಅಂಜದೆ ಕಲ್ಲಾಗಿ ನಿಂತಾಗ ಅಪ್ರತಿಮ ಸೌಂದರ್ಯ ನಮ್ಮ ಮನದಾಳದಲ್ಲಿ ಮೂಡಿ ಹರುಷ ನಗೆಯು ಊಟೆಯಂದದಿ ಧುಮ್ಮು ಕ್ಕುವುದು. ಉಮ್ಮಳದ ಹೊತ್ತಿನಲ್ಲಿ ಸಂಯಮವೇ ಶ್ರೀರಕ್ಷೆಯಾಗಿ ಸ್ಥಿರವಾಗಿ ನಿಲ್ಲುವುದನ್ನು ಹೇಳಿಕೊಡುವುದು. ಉದ್ರಿಕ್ತ ಆವೇಶಗಳಿಗೆ ತಡೆಯೊಡ್ಡಿ ದಾಗ ಶಾಂತಿಯ ಹೊಂಗಿರಣಗಳ ಅಡಿಯಲ್ಲಿ ಅಪ್ರತಿಹತವಾಗಿ ನಮ್ಮ ಅಪ್ರಮತ್ತ ನಡವಳಿಕೆ ಸಮರಸದಲ್ಲರಳಿದ ನಿಜ ನಿಧಿಯಾಗುವುದು.


ಮೊಗ್ಗಿನಲ್ಲರಳುವ ನಗೆಯಾಗಿ, ಗೆಲುವು ಬಾಳಿನ ಗುರುತಾಗಿ, ಸಮತೋಲನ ಸಾಧಿಸಿದ ನಿಲುವಾಗಿ, ಬಾಳು ಮಧುರತೆ ತುಂಬಿದ ಜೇನಾಗಿ, ಹುರುಪಿನೊಂದಿಗೆ ಬೆರೆತ ಹೊಳಪಾಗಿ ,ಭಾವ ಸಂತೃಪ್ತಿಯ ತವರಾಗಿ, ನಳನಳಿಸುವ ನಗು ನಮ್ಮತನದ ಪ್ರತಿಬಿಂಬವಾಗಿ, ಅಪೂರ್ವ ರೂಪದಲಿ ಕಂಗೊಳಿ ಸುವುದು. ಅಂದಮೇಲೆ ಬದುಕು ಗುರುತುಗಳಿಗೆ ಸೀಮಿತವಾಗಿಲ್ಲ ನಮ್ಮ ಅಜ್ಞಾನ ಕರಗಿದಾಗ ಜ್ಞಾನವೇ ಮಾಸದ ನಗೆಯಾಗುತ್ತದೆ. ಇನ್ನು ಗುರುತುಗಳು ಯಾಕೆ ಬೇಕು ?ನಗೆಯು ಜೀವನದ ಉತ್ಕೃಷ್ಟ ಕೊಡುಗೆ ಅಲ್ಲವೇ.....



ಆರತಿ ಏನ್ ರಾವ್

# ಅಳಿವಿನಂಚಿನಲ್ಲಿರುವ ಸಿಂಗಳೀಕ ರಾಜ್ಯದಲ್ಲಿಯೇ ಉತ್ತರ ಕನ್ನಡದಲ್ಲಿ ಮಾತ್ರ ಕಂಡುಬರುತ್ತಿದೆ





ದೇಶದಲ್ಲಿ ಅಳಿವಿನಂಚಿನಲ್ಲಿರುವ ಕೆಲವು ಪ್ರಾಣಿ ಪ್ರಭೇದಗಳಲ್ಲಿ ಸಿಂಗಳೀಕ ಕೂಡ ಒಂದು. ರಾಜ್ಯದ ಉತ್ತರ ಕನ್ನಡದ ಕೈಗಾ ಅರಣ್ಯ ಪ್ರದೇಶ ಹಾರ್ನ್‌ಬಿಲ್ ಪಕ್ಷಿಗೆ ಹೆಸರಾಗಿದ್ದರೆ, ಇನ್ನು ಹೊನ್ನಾವರದ ಗೇರುಸೊಪ್ಪು ಅರಣ್ಯ ಸಿಂಗಳೀಕ ವಾಸಕ್ಕೆ ಯೋಗ್ಯ ಸ್ಥಳವಾಗಿದೆ. ದುರಂತವೆಂದರೆ ಈ ಸಿಂಗಳೀಕ ಕಂಡು ಬರುವುದು ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ಮಾತ್ರ. ಕರ್ನಾಟಕದಲ್ಲಿಯು ಕೂಡ ಉತ್ತರ ಕನ್ನಡ ಜಿಲ್ಲೆಯಲ್ಲಿ.

ಶಿರಸಿ ಹಾಗೂ ಹೊನ್ನಾವರದ ಗೇರುಸೊಪ್ಪದಲ್ಲಿ. ಹಾಗೇ ಇದು 3000 ದಿಂದ 3500 ಮಾತ್ರ ಇದೆ ಎಂದು ಇತ್ತೀಚೆಗೆ ಅಧ್ಯಯನ ನಡೆಸಿದ ಖಗಅಓ (International Union for Conservation of Nature) ಸಂಸ್ಥೆ ಈ ಸತ್ಯವನ್ನು ಬಿಚ್ಚಿಟ್ಟಿದೆ. ಉಳಿದ ಕೋತಿಗಳಂತೆ ಸಿಂಗಳೀಕ ಮನುಷ್ಯರ ಹತ್ತಿರಕ್ಕೆ ಬರುವುದಿಲ್ಲಾ. ಮನುಷ್ಯನನ್ನು ಕಂಡರೆ ಕ್ಷಣ ಮಾತ್ರದಲ್ಲಿ ಮಾಯಾವಾಗಿ ಬಿಡುತ್ತದೆ. ಇದು ಅತೀ ಮರಗಳಿಂದ ಕೂಡಿರುವ ಕಾಡು ಹಾಗೂ ತುಂಬಾ ಎತ್ತರವಿರುವ ಮರಗಳಲ್ಲಿರುವ ಸ್ಥಳಗಳಲ್ಲಿ ಮಾತ್ರ ವಾಸವಾಗಿರುತ್ತದೆ. ವಿವಿಧ ಯೋಜನೆಗಳಿಗಾಗಿ ಈಗಾಗಲೇ ಅನೇಕ ಕಾಡುಗಳು ನಾಶವಾಗಿದೆ.

ಇನ್ನು ವ್ಯವಸಾಯಕ್ಕಾಗಿ ಕಾಡುಗಳು ನಾಶವಾಗುತ್ತಿದೆ. ಉದಾಹರಣೆಗೆ ಮಡಿಕೇರಿಯಲ್ಲಿ ನಡೆದ ಘಟನೆಯನ್ನು ನೆನಪಿಸಿಕೊಳ್ಳಬಹುದು. ಕಾಫಿ ತೋಟಕ್ಕಾಗಿ ಅರಣ್ಯವನ್ನು ನಾಶ ಮಾಡಿದ ಪರಿಣಾಮ ಇಂದು ಅಕ್ಷರ ಸಹ ಕೊಡಗು ಜಿಲ್ಲೆ ನಡುಗಿಹೋಗಿದೆ. ಕೆಲವು ಗ್ರಾಮಗಳು ಕಣ್ಮರೆಯಾಗಿದೆ.

ಇದರಿಂದಾಗಿ ಅನೇಕ ಪ್ರಾಣಿಗಳು ವಲಸೆ ಹೋಗುವಂತಾಯಿತು. ಇನ್ನು ಕೆಲವು ಸಂತತಿಗಳು ನಾಶವಾದವು. ಸಿಂಗಳೀಕ ವಿಷಯದಲ್ಲಿಯು ಕೂಡ ಮರಗಳ ಮಾರಣಹೋಮವೇ ಅವನತಿಗೆ ಕಾರಣವಾಗಿದೆ. ಸಿಂಗಳೀಕ ಮಂಗನ ಪ್ರಭೇದಗಳಲ್ಲಿ ಬಂದರು ಕೂಡ ಮರವನ್ನು ಹತ್ತುವುದು ಮತ್ತು ಇಳಿಯುವುದು ಅತಿ ವೇಗವಾಗಿದೆ.

ನೋಡು ನೋಡುತ್ತಿದ್ದಂತೆ ಪರಾ–ರಿಯಾಗಿ ಬಿಡುತ್ತದೆ. ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ದೇವಿಮನೆ ಅರಣ್ಯ ಪ್ರದೇಶದಲ್ಲಿ ಕಂಡುಬಂದರೆ, ಇನ್ನು ಹೊನ್ನಾವರದ ಗೇರುಸೊಪ್ಪಾದ ಶರಾವತಿ ಕೊಳ್ಳದಲ್ಲಿ ಕಂಡುಬರುತ್ತಿದೆ. ಮೂರು ರಾಜ್ಯದಲ್ಲಿ ಇದು ಗುರುತಿಸಿಕೊಂಡಿದ್ದರೂ ಕೂಡ ಸರಾಸರಿಯಲ್ಲಿ ಗೇರುಸೊಪ್ಪ ಪ್ರಥಮ ಸ್ಥಾನ ಪಡೆದುಕೊಂಡಿದೆ. ಸರಾಸರಿ ಕೇರಳ ಮೌನ ಕಣಿವೆಯಲ್ಲಿ (19.6), ತಮಿಳುನಾಡು ಅಣ್ಣಾಮಲೈ ಅರಣ್ಯ ಪ್ರದೇಶದಲ್ಲಿ (16.3), ಗೇರುಸೊಪ್ಪದಲ್ಲಿ (24.7) ಕಂಡುಬರುತ್ತದೆ. ಶೇ. 99ರಷ್ಟು ಮರದ ಮೇಲೆಯೇ ಕಳೆಯುವ ಸಿಂಗಳೀಕ 17 ಬಗೆಯ ಶಬ್ದಗಳನ್ನು ಹೊರಸೂಸುತ್ತದೆ.

ವೈವಿಧ್ಯ : ಸಸ್ತನಿ ವರ್ಗಕ್ಕೆ ಸೇರಿದ ಸಿಂಗಳೀಕ ಸೆಕೋಪಿಥೆಸಿಡೆ ಕುಟುಂಬಕ್ಕೆ ಸೇ–ರಿದ್ದಾಗಿದ್ದು, ಸಿಲೆನಸ್ ಪ್ರಬೇಧವಾಗಿದೆ. ಕಪ್ಪು ಮೈ ಬಣ್ಣ, ಬಿಳಿ ಕುತ್ತಿಗೆಯಿದ್ದು, 42 ರಿಂದ 61 ಸೆಂಟಿ ಮೀಟ–ರ್‌ವರೆಗೆ ಎತ್ತರವಾಗಿರುತ್ತದೆ. 2 ರಿಂದ 10 ಕೆ–ಜಿಯವರೆಗೆ ಬಾರಹೊಂದಿದ್ದು, 25 ಸೆಂಟಿಮೀಟರ್ ಉದ್ದದ ಬಾಲವನ್ನು ಹೊಂದಿದೆ. 20 ರಿಂದ 30 ವರ್ಷಗಳವರೆಗೆ ಇದು ಜೀವಿಸುತ್ತದೆ. ಸಂತಾನೋತ್ಪತ್ತಿ: ಗಂಡು–ಹೆಣ್ಣಿನ ನಡುವೆ ಹೇಳುವಂತ ಯಾವುದೇ ವ್ಯತ್ಯಾಸವಿಲ್ಲಾ. ಕೇವಲ ಬಾಲದಿಂದ ಮಾತ್ರ ಪತ್ತೆ ಹಚ್ಚಬಹುದು.

ಗಂಡು ಸಿಂಗಳೀಕನ ಬಾಲವು ಹೆಚ್ಚು ಬಿಳಿ ಬಣ್ಣದ ಪಚ್ಚೆಯಿರುತ್ತದೆ. ಹೆಣ್ಣಿನ ಬಾಲ ಸಾಮಾನ್ಯವಾಗಿರುತ್ತದೆ. ಹೆಣ್ಣು 5 ವರ್ಷ ಹಾಗೂ ಗಂಡು 8 ವರ್ಷವಾದ ನಂತರ ಸಂತಾನೋತ್ಪತ್ತಿಗೆ ಅನುವಾಗುತ್ತವೆ. ಗರ್ಭ ಧರಿಸಿದ 165 ದಿನಗಳ ನಂತರ ಮರಿಗೆ ಜನ್ಮ ನೀಡುತ್ತದೆ. ಎಲ್ಲಾ ಸಂದರ್ಭದಲ್ಲಿಯೂ ಈ ಸಿಂಗಳೀಕ ಸಂತಾನೋತ್ಪತ್ತಿ ಮಾಡುತ್ತದೆ. ಆದರೆ ಒಮೆ ಕೇವಲ ಒಂದು ಮರಿಗೆ ಮಾತ್ರ ಜನನ ನೀಡುತ್ತದೆ.

1981ರಲ್ಲಿ ಕೇರಳದ ಮೌನ ಕಣಿವೆಯಲ್ಲಿ ಆಣೆಕಟ್ಟು ನಿರ್ಮಿಸುವ ಪ್ರಸ್ತಾಪ ಬಂದಾಗ ಅಲ್ಲಿ ಅರಣ್ಯ ಪ್ರದೇಶ ಮುಳುಗಡೆಯಾಗಿ ಸಿಂಗಳೀಕ ಸಂತತಿಗೆ ಧಕ್ಕೆ ಬರುತ್ತದೆ.

ಎಂಬುವುದನ್ನು ಮನವರಿಕೆ ಮಾಡಿಸಿದಾಗ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಆಣೆಕಟ್ಟು ನಿರ್ಮಾಣಕ್ಕೆ ಶಾಶ್ವತ ತಡೆಯಾಜ್ಞೆ ನೀಡಿದರು. ಒಟ್ಟಿನಲ್ಲಿ ವಿನಾಶದ ಅಂಚಿನಲ್ಲಿರುವ ಸಿಂಗಳೀಕನ ಉಳವಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಹೆಚ್ಚಿನ ಆಸಕ್ತಿ ಹೊಂದಬೇಕಿದೆ.



ನಾಗರಾಜ ಮಂಜಗುಣಿ,
ಅಂಕೋಲಾ

